


ಕಲೆ: ಗಣೇಶ ಆಚಾರ್ಯ

ಭರಮಣ್ಣನ ತಂಬಿಗೆಯನ್ನು ನೋಡಿದ್ದೀರಿ. ಅದನ್ನು ನೋಡಿ ಎರಡು ದಿನ ಆಗಿದೆ. ಅದು ಹೇಗಿದೆ ಎನ್ನುವುದರ ನೆನಪು ಇರುತ್ತದೆ. ಆ ತಂಬಿಗೆಯ ಚಿತ್ರ ಬಿಡಿಸಿ, ನೋಡೋಣ' ಎನ್ನುತ್ತಾ ಆ ಮೂವರಿಗೆ ಒಂದೊಂದು ಬಿಳಿಹಾಳಿ, ಪೆನ್ಸಿಲ್ ಕೊಟ್ಟರು. ಈಗ ಆ ಮೂವರಲ್ಲೂ ಗೊಂದಲ ಕಂಡಿತು. 'ನೆನಪು ಮಾಡಿಕೊಂಡು ಬಿಡಿಸಿ' ಎಂದರು. ಮೂವರೂ ನೆನಪಿಸಿಕೊಳ್ಳುವವರಂತೆ ಕ್ಷಣ ಮೌನ ವಹಿಸಿ, ನಿಧಾನವಾಗಿ ತಂಬಿಗೆಯ ಚಿತ್ರ ಬಿಡಿಸಿದರು.

ರಾಮಣ್ಣ ಆ ಚಿತ್ರಗಳನ್ನು ತೆಗೆದುಕೊಂಡು ನೋಡಿದರು. ಒಂದು ಚಿತ್ರಕ್ಕೂ ಇನ್ನೊಂದಕ್ಕೂ ಹೋಲಿಕೆಯೇ ಇರಲಿಲ್ಲ. ಅಂದರೆ, ಇವರ್‍ಯಾರೂ ತಂಬಿಗೆಯನ್ನೂ ನೋಡಿಲ್ಲ, ಕೊಡುವುದನ್ನೂ ನೋಡಿಲ್ಲ. ದಾಕ್ಷಿಣ್ಯಕ್ಕೆ ಬಿದ್ದು ಸುಳ್ಳು ಹೇಳಿದ್ದಾರೆ ಎಂದು ತಿಳಿದು ಹೋಯಿತು.

'ದಾಕ್ಷಿಣ್ಯಕ್ಕೆ ಸುಳ್ಳು ಸಾಕ್ಷಿ ಹೇಳಬಾರದಿತ್ತು' ಎಂದು ಅವರನ್ನು ದಿಟ್ಟಿಸಿ ನೋಡಿದರು. ಅವರು ತಲೆ ತಗ್ಗಿಸಿದ್ದರು. ರಾಮಣ್ಣನಿಗೆ ಈಗ ಸತ್ಯ ಏನೆಂದು ತಿಳಿಯಿತು.

ಮರು ದಿನ ಶಂಕರಪ್ಪನಿಗೆ ಬರಹೇಳಿದರು.

'ಅವರ್‍ಯಾರೂ ನೀವು ತಂಬಿಗೆ ಕೊಡುವುದನ್ನು ನೋಡಿಲ್ಲ ಎನ್ನುವುದು ಸಾಬೀತಾಗಿದೆ. ಪಾಪ ನಿಮಗೂ ಮರೆತು ಹೋಗಿರಬಹುದು. ಸರಿಯಾಗಿ ನೆನಪು ಮಾಡಿಕೊಳ್ಳಿ, ಅದನ್ನು ಎಲ್ಲೋ ಮನೆಯಲ್ಲಿಯೇ ಇಟ್ಟು ಮರೆತಿರಬೇಕು. ಅದನ್ನು ಹುಡುಕಿ ಭರಮಣ್ಣನಿಗೆ ಕೊಡಿ' ಎಂದರು ನೇರವಾಗಿ. ತನ್ನ ಸುಳ್ಳು ಬಯಲಾಯಿತು ಎನ್ನುವುದನ್ನರಿತ ಶಂಕರಪ್ಪ, 'ಇರಬಹುದು, ವಯಸ್ಸಾಯ್ತು ನೋಡಿ, ಮರೆತು ಬಿಟ್ಟೆ ಅಂತ ಕಾಣುತ್ತೆ. ನನ್ನ ಮನೆಯಲ್ಲಿಯೇ ಇನ್ನೊಂದು ಸಲ ನೋಡುವೆ' ಎಂದು ಎದ್ದ.

ರಾಮಣ್ಣನ ಹೆಂಡತಿಯ ಸಲಹೆ ಫಲಿಸಿತ್ತು. ಮೆದುವಾಗಿಯೇ ಸಮಸ್ಯೆ ಬಗೆಹರಿದಿತ್ತು. ಭರಮಣ್ಣನಿಗೆ ಕೈತಪ್ಪಿ ಹೋಗಿದ್ದ ತಂಬಿಗೆ ಸಿಕ್ಕಿತು. ಶಂಕರಪ್ಪನಿಗೆ ತನ್ನ ತಪ್ಪಿನ ಅರಿವಾಯಿತು.